ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ   ದಿನಾಂಕ : DATE : 2/6/20

# ಮಾನ್ಸೂನ್ ಧಮಾಕ!

## ಕೃಷಿಕರು, ಸಣ್ಣ ಉದ್ಯಮ, ಬೀದಿ ವ್ಯಾಪಾರಿಗಳಿಗೆ ನೆರವು

## 14 ಬೆಳೆಗಳ ಎಂಎಸ್ಪಿ ಹೆಚ್ಚಳ, ಎಂಎಸ್ಎಂಇಗೆ ಕಾಯಕಲ್ಪ

02.06.2020

■ ವಿಜಯವಾಣಿ ಸುದ್ದಿಜಾಲ ನವದೆಹಲಿ

ಕರೊನಾ ವೈರಸ್‌ನಿಂದ ತತ್ತರಿಸಿರುವ ಆರ್ಥಿಕತೆಗೆ ಪುನಶ್ಚೇತನ ನೀಡಲು ಹಾಗೂ ಕೃಷಿಕ ವರ್ಗಕ್ಕೆ ನೆರವಾಗುವ ನಿಟ್ಟಿನಲ್ಲಿ ರೂ. 20 ಲಕ್ಷ ಕೋಟಿ ಮೊತ್ತದ ಆತ್ಮನಿರ್ಭರ್ ಹಣಕಾಸು ಪ್ಯಾಕೇಜ್ ಘೋಷಣೆ ಮಾಡಿದ್ದ ಕೇಂದ್ರ ಸರ್ಕಾರ, ಈಗ ಮತ್ತೊಂದು ಮಹತ್ವದ ಕ್ರಮದೊಂದಿಗೆ ದೇಶದ ರೈತರು ಮತ್ತು ಶ್ರಮಿಕರ ರಕ್ಷಣೆಗೆ ಧಾವಿಸಿದೆ. ಸೋಮವಾರ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಂಪುಟ ವ್ಯವಹಾರ ಆರ್ಥಿಕ ಸಮಿತಿ ಸಭೆಯಲ್ಲಿ, 2020-21ರ ಮಾರುಕಟ್ಟೆ ಋತುವಿಗೆ ಅನ್ವಯವಾಗುವಂತೆ ಬಹುಪಾಲು ಮುಂಗಾರು ಬೆಳೆಗಳ ಕನಿಷ್ಠ ಬೆಂಬಲ ಬೆಲೆ (ಎಂಎಸ್ಪಿ) ಹೆಚ್ಚಿಸುವ, ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಂಎಸ್ ಎಂಇ) ಜತೆಗೆ ಬೀದಿ ಬದಿ ವ್ಯಾಪಾರಿಗಳಿಗೆ ರಕ್ಷಣೆ ಒದಗಿಸುವ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ.

ಪರಿಷ್ಕೃತ ಕ್ರಮದಲ್ಲಿ ಹುಚ್ಚೆಳ್ಳಿಗೆ ಅತ್ಯಧಿಕ ಎಂಎಸ್ಪಿ (ಕ್ವಿಂಟಲ್‌ಗೆ 755 ರೂ.) ನಿಗದಿಯಾಗಿದ್ದು, ಎಳ್ಳಿಗೆ ಕ್ವಿಂಟಾಲ್‌ಗೆ 370ರೂ., ಉದ್ದಿನಬೇಳೆ ಕ್ವಿಂಟಾಲ್‌ಗೆ 300 ರೂ. ಮತ್ತು ಹತ್ತಿಗೆ ಕ್ವಿಂಟಾಲ್‌ಗೆ 275 ರೂ. ಎಂಎಸ್‌ಪಿ ಹೆಚ್ಚಳಕ್ಕೆ ತೀರ್ಮಾನಿಸಲಾಗಿದೆ. ಕೃಷಿ ಬೆಳೆಯಲ್ಲಿನ ವೈವಿಧ್ಯತೆ ಹೆಚ್ಚಿಸುವುದು ಕೂಡ ಈ ಕ್ರಮದ ಮುಖ್ಯ ಉದ್ದೇಶ ಎಂದು ಕೇಂದ್ರ ಹೇಳಿದೆ.



» ಪಿಎಂ ಸ್ವನಿಧಿ ಅನ್ವಯ ಮೈಕ್ರೋ ಕ್ರೆಡಿಟ್ ಸೌಲಭ್ಯ

» 50 ಲಕ್ಷ ವ್ಯಾಪಾರಿಗಳಿಗೆ ಅನುಕೂಲ

» ಯೋಜನೆ ನಿರ್ವಹಣೆಗೆ ವೆಬ್ ಪೋರ್ಟಲ್, ಮೊಬೈಲ್ ಅಪ್ಲಿಕೇಷನ್ ಅಭಿವೃದ್ಧಿ

**ಬೀದಿ ವ್ಯಾಪಾರಿಗಳಿಗೆ ಸಿಹಿ:** ಬೀದಿ ಬದಿ ವ್ಯಾಪಾರಿಗಳಿಗೆ ಕೈಗೆಟುಕುವ ರೀತಿಯಲ್ಲಿ 10 ಸಾವಿರ ರೂ.ವರೆಗೆ ಸಾಲ ಒದಗಿಸಲು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ವಿಶೇಷ ಮೈಕ್ರೋ- ಕ್ರೆಡಿಟ್ ಸೌಲಭ್ಯ ಯೋಜನೆ ಪ್ರಾರಂಭಿಸಿದೆ. ಇದಕ್ಕೆ ಪಿಎಂ ಸ್ವನಿಧಿ ಎಂದು ಹೆಸರಿಡಲಾಗಿದೆ. ಕರೊನಾ ಮಹಾಮಾರಿ ಮಧ್ಯೆ ಈ ಮಾರಾಟಗಾರರಿಗೆ ತಮ್ಮ ಕೆಲಸ ಪುನರಾರಂಭಿಸಲು ಮತ್ತು ಜೀವನೋಪಾಯಕ್ಕೆ ನೆರವಾಗಲು ಯೋಜನೆ ನೆರವಾಗಲಿದೆ ಎಂದು ಸರ್ಕಾರ ಹೇಳಿದೆ. ವ್ಯಾಪಾರಿಗಳು, ತಳ್ಳುಗಾಡಿ ವ್ಯಾಪಾರಿಗಳು ಸೇರಿದಂತೆ 50 ಲಕ್ಷಕ್ಕೂ ಹೆಚ್ಚು ಮಂದಿ ಈ ಯೋಜನೆ ಲಾಭ ಪಡೆಯುವ ಸಾಧ್ಯತೆ ಇದೆ. ಬೀದಿ ಬದಿ ವ್ಯಾಪಾರಿಗಳು ಸರಬರಾಜು ಮಾಡುವ ಸರಕುಗಳಲ್ಲಿ ತರಕಾರಿಗಳು, ಹಣ್ಣುಗಳು, ಬೀದಿಬದಿಯ ಸಿದ್ಧ ಆಹಾರಗಳು, ಚಹಾ, ಪಕೋಡಾ, ಬ್ರೆಡ್, ಮೊಟ್ಟೆ, ಜವಳಿ, ಉಡುಪು, ಪಾದರಕ್ಷೆ, ಕುಶಲಕರ್ಮಿ ಉತ್ಪನ್ನ, ಪುಸ್ತಕ ಇತ್ಯಾದಿ ಒಳಗೊಂಡಿವೆ. ಅವರ ಸೇವೆಗಳಲ್ಲಿ ಕ್ಷೌರಿಕನ ಅಂಗಡಿ, ಚಮ್ಮಾರರು, ಪಾನ್ ಶಾಪ್, ಲಾಂಡ್ರಿ ಕೆಲಸಗಳು ಸೇರಿವೆ.

ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಯೋಜನೆ ನಿರ್ವಹಿಸಲು ವೆಬ್ ಪೋರ್ಟಲ್ / ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಲಾಗುತ್ತಿದೆ. ಇದರಿಂದ ಹಣಕಾಸು ವ್ಯವಸ್ಥೆಯಲ್ಲಿ ಅವರನ್ನು ತೊಡಗಿಸಲು ಸಹಕಾರಿಯಾಗಲಿದೆ.



ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಪ್ರಕಾಶ್ ಜಾವಡೇಕರ್ ಸುದ್ದಿಗೋಷ್ಠಿಯಲ್ಲಿ ಸಂಪುಟದ ನಿರ್ಧಾರ ಪ್ರಕಟಿಸಿದರು.

ಪಿಎಂ ಸ್ಟ್ರೀಟ್ ವೆಂಡರ್ ಆತ್ಮ ನಿರ್ಭರ್ ನಿಧಿ ಬಹಳ ವಿಶೇಷವಾದ ಯೋಜನೆ. ಮೊದಲ ಬಾರಿಗೆ, ನಮ್ಮ ಬೀದಿ ಬದಿ ವ್ಯಾಪಾರಸ್ಥರು ಜೀವನೋಪಾಯ ಯೋಜನೆಯ ಭಾಗವಾಗಿದ್ದಾರೆ. ಈ ಯೋಜನೆ ತಂತ್ರಜ್ಞಾನ ಬಳಸಿಕೊಳ್ಳಲಿದೆ ಮತ್ತು ಸಾಮರ್ಥ್ಯ ವೃದ್ಧಿಗೆ ಒತ್ತು ನೀಡಲಿದೆ

। ನರೇಂದ್ರ ಮೋದಿ ಪ್ರಧಾನ ಮಂತ್ರಿ

## ಅನ್ನದಾತರಿಗಿನ್ನು ಹೆಚ್ಚಿನ ಆದಾಯ

ಎಂಎಸ್ಪಿ ಏರಿಕೆಯಿಂದಾಗಿ ರೈತರಿಗೆ ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಿನ ಆದಾಯ ಲಭಿಸಲಿದ್ದು, ಜೋಳ ಶೇ. 83% ಮತ್ತು ಉದ್ದಿನ ಬೇಳೆ ಶೇ.64, ತೊಗರಿಬೇಳೆ ಶೇ. 58% ಮತ್ತು ಮೆಕ್ಕೆಜೋಳ ಶೇ.53 ಲಾಭ ತಂದುಕೊಡುವ ನಿರೀಕ್ಷೆ ಇದೆ. ಉಳಿದ ಬೆಳೆಗಳಲ್ಲಿ ರೈತರಿಗೆ ಕನಿಷ್ಠ 50% ಹೆಚ್ಚಿನ ಆದಾಯವನ್ನು ಕೇಂದ್ರ ಅಂದಾಜಿಸಿದೆ. ದೇಶದ ಕೃಷಿ-ಹವಾಮಾನ ಪರಿಸ್ಥಿತಿಗಳೊಂದಿಗೆ ಹೊಂದಿಕೆಯಾಗುವ ವೈವಿಧ್ಯಮಯ ಬೆಳೆ ಮಾದರಿ ಜತೆಗೆ ಸುಸ್ಥಿರ ಕೃಷಿ ಉತ್ತೇಜಿಸಬೇಕೆಂಬ ಉದ್ದೇಶವೂ ಈ ಘೋಷಣೆ ಹಿಂದಿದೆ. ರೈತರ ಆದಾಯ ಸುರಕ್ಷತೆಗೆ ಒತ್ತು ನೀಡುವ ಉದ್ದೇಶದಿಂದ ಉತ್ಪಾದನಾಕೇಂದ್ರಿತ ವಿಧಾನವನ್ನು ಆದಾಯ ಕೇಂದ್ರಿತ ವಿಧಾನಕ್ಕೆ ಬದಲಾಯಿಸಲಾಗಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಮಾಹಿತಿ ಹಂಚಿಕೊಂಡಿದ್ದಾರೆ. ಕೋವಿಡ್-19 ಕಾರಣದಿಂದಾಗಿ ರೈತರಿಗೆ ಸಮಸ್ಯೆಯಾಗಿದ್ದರೂ, ಕೃಷಿ ಉತ್ಪನ್ನಗಳ ಮಾರಾಟಕ್ಕೆ ಅನುಕೂಲ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ನೇರ ವ್ಯಾಪಾರೋದ್ಯಮಕ್ಕೆ ಅನುಕೂಲವಾಗುವಂತೆ ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಲಾಗಿದೆ. ● ಪುಟ 2

**ಬೆಂಬಲ ಬೆಲೆ ಪಟ್ಟಿ** (ಪ್ರತಿ ಕ್ವಿಂಟಾಲ್‌ಗೆ ರೂ.ಗಳಲ್ಲಿ)

| | | |
|---|---|---|
| ಭತ್ತ | 1,245 | 1,868 |
| [illegible] | 1,245 | 1,888 |
| ಜೋಳ | 1,746 | 2,620 |
| ರಾಗಿ | 2,194 | 3,295 |
| ಮೆಕ್ಕೆ ಜೋಳ | 1,213 | 1,850 |
| ತೊಗರಿ | 3,796 | 6,000 |
| ಹೆಸರು ಕಾಳು | 4,797 | 7,196 |
| ಉದ್ದು | 3,660 | 6,000 |
| ನೆಲಗಡಲೆ | 3,515 | 5,275 |
| ಸೂರ್ಯಕಾಂತಿ | 3,921 | 5,885 |
| ಹತ್ತಿ | 3,676 | 5,515 |
| ಎಳ್ಳು | 4,570 | 6,855 |

## ಕಿರು, ಸಣ್ಣ ಉದ್ದಿಮೆಗಳಿಗೆ ರಕ್ಷಾ ಕವಚ



» 2 ಲಕ್ಷ ಉದ್ದಿಮೆಗಳಿಗೆ ಕೇಂದ್ರದ ನೆರವು

ವಿಪರೀತ ಆರ್ಥಿಕ ಸಮಸ್ಯೆ ಎದುರಿಸುತ್ತಿರುವ ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಂಎಸ್‌ಎಂಇ) ರಕ್ಷಣೆಗಾಗಿ ಕೇಂದ್ರ ಸರ್ಕಾರ 20,000 ಕೋಟಿ ರೂ ಪರಿಹಾರ ನಿಧಿ ಘೋಷಣೆ ಮಾಡಿದ್ದು, ಈ ಹಣವನ್ನು ಉದ್ದಿಮೆಗಳ ಪ್ರವರ್ತಕರಿಗೆ ನೀಡುವುದಾಗಿ ತಿಳಿಸಿದೆ. ರೂ. 5 ಲಕ್ಷವರೆಗಿನ ಸಾಲದ ಹಣದಲ್ಲಿ 85 ಪ್ರತಿಶತದವರೆಗೆ ಗ್ಯಾರಂಟಿ ಕವರೇಜ್ ಅನ್ನು ಸರ್ಕಾರ ನೀಡಲಿದೆ. ಹಣಕಾಸು ಸಂಸ್ಥೆಗಳಿಗೆ 5 ಲಕ್ಷಕ್ಕಿಂತ ಹೆಚ್ಚು ಸಾಲ ನೀಡಿದ ಸಂದರ್ಭದಲ್ಲಿ 75 ಪ್ರತಿಶತದಷ್ಟು ಗ್ಯಾರಂಟಿ ಕವರೇಜ್ ಅನ್ನು ಸರ್ಕಾರದಿಂದ ನೀಡಲು ತೀರ್ಮಾನಿಸಲಾಗಿದೆ. ತೊಂದರೆಗೀಡಾಗಿರುವ ಎಂಎಸ್‌ಇಎಂಗಳಿಗೆ ಶೇ.15 ಅಥವಾ 75 ಲಕ್ಷ ರೂ.ವನ್ನು ಪ್ರವರ್ತಕರಿಗೆ ನೀಡಲಿದೆ. ● ಪುಟ 2